# 7. ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಹೊಳಲೂರು ಶಿವಮೊಗ್ಗ

## ಶಾಲಾ ಇತಿಹಾಸ –

ತುಂಗಭದ್ರ ನದಿಯ ದಂಡೆಯ ಮೇಲೆ ಕೇಂದ್ರಿಕೃತವಾಗಿರುವ ಹೊಳಲೂರು ಗ್ರಾಮದ ಹೃದಯಭಾಗದಲ್ಲಿ 1920ರಲ್ಲಿ ಪ್ರಾರಂಭವಾಗಿರುವ ನಮ್ಮ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಹೊಳಲೂರು, ಶಿವಮೊಗ್ಗ ಜಿಲ್ಲಾ ಕೇಂದ್ರದಿಂದ ಸರಿಸುಮಾರು 18 ಕಿ.ಮೀ.ದೂರದಲ್ಲಿದೆ. ಉತ್ತಮ ಬೋಧನಾ ಕೌಶಲ್ಯ ಹೊಂದಿರುವ ನುರಿತ ಅನುಭವಿ 6 ಶಿಕ್ಷಕರು ಹಾಗೂ 88 ಮಕ್ಕಳನ್ನು 1 ರಿಂದ 8ನೇ ತರಗತಿಯವರೆಗೆ ಹೊಂದಿರುತ್ತದೆ. ಶಾಲಾ ಚಟುವಟಿಕೆಗಳಲ್ಲಿ ಉತ್ತಮ ಭಾಗಿದಾರರನ್ನು, ಎಸ್.ಡಿ.ಎಂ.ಸಿಯನ್ನು, ಉತ್ತಮ ಸಹಕಾರ ಮನೋಭಾವ ಹೊಂದಿರುವ ಗ್ರಾಮಸ್ಥರನ್ನು ಒಳಗೊಂಡಿದೆ. ಪ್ರಸ್ತಕ ವರ್ಷದಲ್ಲಿ ಮಕ್ಕಳು ವಿವಿಧ ಆಟೋಟ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಮಕ್ಕಳ ಯೋಗ್ಯತಾನುಸಾರವಾಗಿ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಪ್ರಸ್ತುತ ವರ್ಷದಲ್ಲಿ ನಮ್ಮ ಶಾಲೆಯ ನಲಿ ಕಲಿ ಕೊಠಡಿಯನ್ನು ಗ್ರಾಮ ಪಂಚಾಯತಿ ಹೊಳಲೂರು ಹಾಗೂ ಎಸ್.ಡಿ.ಎಂ.ಸಿಯ ಸಹಕಾರದಿಂದ ಅಭಿವೃದ್ಧಿ ಪಡಿಸಿದ್ದು ಈ ಕೊಠಡಿಯು ಮಕ್ಕಳ ಕಲಿಕೆಗೆ ಪೂರಕವಾಗುವಂತೆ ನಲಿಕಲಿ ನಿಯಮದ ಆಶಯದಂತೆ ಸ್ವ–ಕಲಿಕೆ, ಸ್ವವೇಗದ ಕಲಿಕೆ ಮತ್ತು ಸಂತಸದಾಯಕ ಕಲಿಕೆಗೆ ಮಾದರಿಯಾಗಿದೆ. ನಲಿಕಲಿ ಕೊಠಡಿ ಅಭಿವೃದ್ಧಿ ಪಡಿಸಲು ಇಲಾಖಾ ಅಧಿಕಾರಿಗಳ ಮಾರ್ಗದಶನ ಸಲಹೆ ಮತ್ತು ಅಭಿಪ್ರಾಯಗಳನ್ನು ಪಡೆದುಕೊಂಡು ಆಕರ್ಷಣೀಯವಾಗುವಂತೆ, ಕಲಿಕೆಗೆ ಪೂರಕವಾಗುವಂತೆ ಮಕ್ಕಳಲ್ಲಿ ಸಂತಸ ಮೂಡುವಂತೆಯೂ ಮಾಡಲಾಗಿದ್ದು, ನಮ್ಮ ಶಾಲೆಯು ಉತ್ತಮ ಶಾಲೆಯಾಗಿ ರೂಪಗೊಂಡಿದೆ.

















## ವಾಲ್ ಸ್ಲೇಟ್

ಶಾಲೆಯ ನಲಿ–ಕಲಿ ಕೂಠಡಿಯಲ್ಲಿ ಮಕ್ಕಳ ಸ್ವಕಲಿಕೆಗೆ ಪೂರಕ ವಾಗುವಂತೆ ಸೂಕ್ತ ಸ್ಥಳ ಪ್ರತ್ಯೇಕ ಆಸನದೊಂದಿಗೆ ವೈಯಕ್ತಿಕ ಮಕ್ಕಳ ಕಲಿಕೆಗೆ ಕಪ್ಪುಹಲಗೆ ಮಾಡಿಸಿರುವುದು ಮಕ್ಕಳ ಕಲಿಕೆಗೆ ವಾಲ್ ಸ್ಲೇಟ್ ಆಕರ್ಷಣೀಯವಾಗಿದೆ.




**ಪೋಪೆಟ್ ಪರದೆ** ಮಕ್ಕಳಿಗೆ ನೈಜ ಕಲಿಕೆ, ಅನುಭವದ ಕಲಿಕೆ, ಅಭಿನಯದ ಕಲಿಕೆಗೆ ಪೂರಕವಾಗುವಂತೆ ಶಾಲೆಯಲ್ಲಿ ಉತ್ತಮವಾದ ಪೋಪೆಟ್ ಪರದೆಯನ್ನು ಅನುಕೂಲವಾಗುವ ಪ್ರಾಣಿಗಳ ಚಿತ್ರಿಕೃತ ಮಾದರಿಗಳನ್ನು ಮತ್ತು ಫ್ಲಾಷ್ ಕಾರ್ಡುಗಳು ಹಾಗು ಕಡ್ಡಿ ಬೀಜಗಳನ್ನು ಹೊಂದಿರುವುದು ಆಹ್ಲಾದಕರವಾಗಿದೆ.



## ಕಲಿಕಾ ಚಪ್ಪರ

ನಲಿ–ಕಲಿ ನಿಯಮದಂತೆ ಕೊಠಡಿಯಲ್ಲಿ ಸುಮಾರು 6–7 ಅಡಿ ಎತ್ತರದಲ್ಲಿ ಮಕ್ಕಳು ತಯಾರಿಸಿದ ಕ್ರಾಫ್ಟ್ ಚಟುವಟಿಕೆಗಳು ಪ್ರಗತಿ ನೊಟಕ್ಕೆ ಅನುಸಾರವಾಗಿ ಪ್ರದರ್ಶನಗೊಂಡಿರುವುದು ಕೊಠಡಿಯ ಮೆರಗನ್ನು ಹೆಚ್ಚಿಸಿದೆ.

**ಕಾರ್ಡುಗಳು:–** 1 ಮತ್ತು 2ನೇ ತರಗತಿಯ ಕಾರ್ಡುಗಳನ್ನು ಕ್ರಮಬದ್ಧವಾಗಿ ಮೆಟ್ಟಿಲು ಮೈಲಿಗಲ್ಲಿಗನುಸಾರವಾಗಿ ಜೊಡಿಸಲು ಮರದ ಅಡ್ಡ–ಲಂಬ ಸಾಲುಗಳುಳ್ಳ ಪೆಟ್ಟಗೆಯು ವಿದ್ಯಾರ್ಥಿಗಳ ಕೈಗೆಟುವಂತೆ ಇಡಲಾಗಿದೆ. ಪ್ರಗತಿ ನೋಟಕ್ಕೆ ಅನುಗುಣವಾಗಿ ಮಕ್ಕಳು ಕಾರ್ಡುಗಳನ್ನು ಬಳಸುತ್ತಿದ್ದು ಕಲಿಕೆ ಫಲಪ್ರದ ವಾಗಿರುವುದು ಕಂಡು ಬಂದಿರುತ್ತದೆ.





## ಗುಂಪು ತಟ್ಟೆಗಳು: –

ಮಕ್ಕಳ ಸಂತಸದಾಯಕ ಕಲಿಕೆ ಅನುಕೂಲವಾಗುವಂತೆ ನಲಿ–ಕಲಿ ನಿಯಮದಂತೆ ಕಲಿಕ ಗುಂಪುತಟ್ಟೆಗಳನ್ನು ಕೊಠಡಿಯಲ್ಲಿ ನಿಗಧಿತ ಸ್ಥಳದಲ್ಲಿ ಅಳವಡಿಸಲಾಗಿದೆ. ಕಲಿಕೆಗೆ ಪೂರಕವಾಗಿರುವ ಇವುಗಳನ್ನು ಮಕ್ಕಳ ಸೂಕ್ತವಾಗಿ ಬಳಸಿಕೊಳ್ಳುತಿದ್ದಾರೆ.




## ಗುಂಪು ತಟ್ಟೆಗಳು: –

ಮಕ್ಕಳ ಸಂತಸದಾಯಕ ಕಲಿಕೆ ಅನುಕೂಲವಾಗುವಂತೆ ನಲಿ–ಕಲಿ ನಿಯಮ ದಂತೆ ಕಲಿಕಾ ಗುಂಪು ತಟ್ಟೆಗಳನ್ನು ಕೊಠಡಿಯಲ್ಲಿ ನಿಗಧಿತ ಸ್ಥಳದಲ್ಲಿ ಅಳವಡಿಸಲಾಗಿದೆ. ಕಲಿಕೆಗೆ ಪೂರಕವಾಗಿರುವ ಇವುಗಳನ್ನು ಮಕ್ಕಳು ಸೂಕ್ತವಾಗಿ ಬಳಸಿಕೊಳ್ಳುತಿದ್ದಾರೆ.

## ಹವಾಮಾನ ನಕ್ಷೆ

ಮಕ್ಕಳಲ್ಲಿ ವಾತಾವರಣದ ಬದಲಾವಣೆಗಳನ್ನು ಅರ್ಥೈಸುವ ಸಲುವಾಗಿ ವಾಯುಗುಣದ ಪರಿಕಲ್ಪನೆ ಮೂಡಿಸಲು ನಲಿ–ಕಲಿ ಆಶಯದಂತೆ ತರಗತಿಗೆ ಅನುಗುಣವಾಗಿ ನಮೂದಿಸಲು ಹವಾಮಾನ ನಕ್ಷೆಯನ್ನು ಸೂಕ್ತ ಸ್ಥಳದಲ್ಲಿ ಮಕ್ಕಳಿಗೆ ದೊರಕುವಂತೆ ಇಡಲಾಗಿದೆ. ಮಕ್ಕಳು ತಾವೇ ದಿನದ ವಿವಿಧ ಹಂತಗಳ ಹವಾಮಾನ ಪರಿಶೀಲಿಸಿ ನಮೂದಿಸಿ ತಿಂಗಳ ಅಂತ್ಯದಲ್ಲಿ ಕ್ರೂಢಿಕರಿಸಿ ವಿಶ್ಲೇಷಿಸುವುದು ತೃಪ್ತಿತಂದಿರುತ್ತದೆ.

## ಪ್ರಗತಿ ನೋಟ

ಪ್ರತಿ ದಿನದ ಕಲಿಕೆಯು ಸದೃಢವಾಗಲು ಹಿಂದಿನ ಕಲಿಕೆಯು ಪುನರ್ಬಲನ ಹೊಂದಲು ಮುಂದಿನ ಕಲಿಕೆಗೆ ಸಹಕಾರಿಯಾಗಲು ಪ್ರಗತಿನೋಟಗಳನ್ನು ಮಕ್ಕಳ ಕೈಗೆಟ್ಟುವಂತೆ ಪ್ರದರ್ಶಿಸಲಾಗಿದೆ, ಪ್ರತಿ ದಿನವೂ ಮಕ್ಕಳು ತಾವೆ ಪ್ರಗತಿ ನೋಟದೊಂದಿಗೆ ಕಲಿಕೆಗೆ ಸಿದ್ಧರಾಗುತ್ತಿರುವುದು ತೃಪ್ತಿತಂದಿರುತ್ತದೆ,

## ಅಭ್ಯಾಸ ಪುಸ್ತಕಗಳು: –

ಮಕ್ಕಳ ಗೃಹ ಪಾಠಕ್ಕೆ ಸಿಮಿತವಾಗಿರುವ ಅಭ್ಯಾಸ ಪುಸ್ತಕಗಳನ್ನು ಪ್ರತಿ ದಿನ ಮಕ್ಕಳಿಗೆ ನೀಡಿ ಮರು ದಿನ ಬೆಳಗ್ಗೆ ಅವುಗಳನ್ನು ಕ್ರಮಬದ್ದವಾಗಿ ಜೋಡಿಸಲು ರ್‍ಯಾಕ್ ಸೌಲಭ್ಯವನ್ನು ಹೊಂದಿರುವುದು ಕೊಠಡಿಯ ಅಂದವನ್ನು ಹೆಚ್ಚಿಸಿದೆ. ಅಭ್ಯಾಸಪುಸ್ತಕಗಳನ್ನು ಪ್ರತಿದಿನ ತಿದ್ದಿ ದಿನಾಂಕ ನಮೂದಿಸಲಾಗುತ್ತಿದೆ.

## ಶಿಕ್ಷಕರ ದಿನಚರಿ: –

ಮಕ್ಕಳು ಪ್ರತಿದಿನ ನಿರ್ವಹಿಸಿದ ಚಟುವಟಿಕೆಗಳನ್ನು ಸಂಖ್ಯೆ ನಮೂದಿಸಲು ಶಿಕ್ಷಕರು ದಿನಚರಿ ಇಟ್ಟಿರುತ್ತಾರೆ. ಪ್ರಗತಿನೋಟ ಹಾಗೂ ದಿನಚರಿ ಮಾಹಿತಿಗೂ ತಾಳೆಯಾಗುತ್ತಿರುವುದು ದಾಖಲೆ ನಿರ್ವಹಣೆ ಉತ್ತಮ ನಿರ್ವಹಣೆಯಾಗುತ್ತಿರುವುದು ಕಂಡು ಬಂದಿದೆ.

### ಸೂಕ್ತ ಸ್ಥಳಾವಕಾಶ

ನಲಿ–ಕಲಿ ಕೊಠಡಿಯೊಳಗೆ ಗುಂಪುಗಳ ನಿರ್ವಹಣೆಗೆ ಸ್ಥಳ ನಿಗಧಿಗೊಳಿಸಿದ್ದು ಮಕ್ಕಳು ಪ್ರಗತಿ ನೋಟಕ್ಕೆ ಅನುಗುಣವಾಗಿ ತಮ್ಮತಮ್ಮ ಗುಂಪುಗಳಲ್ಲಿ ಚಟುವಟಿಕೆ ನಿರ್ವಹಿಸಲು ಸೂಕ್ತ ಸ್ಥಳಾವಕಾಶ ಮಾಡಿಕೊಡಲಾಗಿದೆ.



### ನಲಿ–ಕಲಿ ಭೋಧನಾ ಪ್ರಕ್ರಿಯೆ

ನಲಿ–ಕಲಿ ತರಬೇತಿಯನ್ನು ಹೊಂದಿರುವ ಶಿಕ್ಷಕಿಯಿದ್ದು ಭೋದನೆಯನ್ನು ಸಂಪೂರ್ಣ ನಲಿ–ಕಲಿ ವಿಧಾನದಲ್ಲಿ ಮಾಡುತ್ತಿರುವುದು ಸಂತಸ. ಶ್ರೀಮತಿ ನೂರ್ ಫಾತೀಮ ಶಿಕ್ಷಕರು ಮೈಲಿಗಲ್ಲು ಮೆಟ್ಟಿಲುವಾರು ಹಾಗು ವಿಷಯವಾರು ಕಲಿಕೋಪಕರಣಗಳು ತಯಾರಿಸಿಕೊಂಡು ನಲಿ–ಕಲಿ ಬೋಧನಾ ಪ್ರಕ್ರಿಯೆಯನ್ನು ಮಾಡುತ್ತಿದ್ದಾರೆ.






### ಕಲಿಕ ಸಾಮಗ್ರಿಗಳು

ಮಕ್ಕಳ ಸ್ವ–ವೇಗದ ಕಲಿಕೆಗೆ ಸಹಕಾರಿವಾಗುವಂತೆ ಪ್ರತಿ ವಿಷಯವಾರು ಪ್ರತಿ ಮೈಲುಗಲ್ಲುವಾರು ಪ್ರತಿ ಮೆಟ್ಟಲುಗಳಿಗೆ ಅನುಕೂಲವಾಗುವಂತೆ ಶಾಲೆಯ ನಲಿ–ಕಲಿ ಭೊದಕ ಶಿಕ್ಷಕರು ಹಾಗೂ ಮಕ್ಕಳು ತಯಾರಿಸಿರುವ ಕಲಿಕಾ ಸಾಮಗ್ರಿಗಳನ್ನು ಮಕ್ಕಳ ಕೈಗೆಟ್ಟುವಂತೆ ಜೋಡಿಸಿರುವುದು ಕೊಠಡಿಯ ಅಂದವನ್ನು ಹೆಚ್ಚಿಸಿದೆ.

## ಕಲಿಕ ಸಾಮಗ್ರಿಗಳು [ಮುಖವಾಡಗಳು]







ಮಕ್ಕಳ ಸ್ವ–ವೇಗದ ಕಲಿಕೆಗೆ ಸಹಕಾರಿವಾಗುವಂತೆ ವಿಷಯವಾರು, ಮೈಲುಗಲ್ಲುವಾರು ಮೆಟ್ಟಲುಗಳಿಗೆ ಅನುಕೂಲವಾಗುವಂತೆ ಶಿಕ್ಷಕರು ಹಾಗೂ ಮಕ್ಕಳು ತಯಾರಿಸಿರುವ ಕಲಿಕಾ ಸಾಮಗ್ರಿಗಳನ್ನು ಮಕ್ಕಳ ಕೈಗೆಟುಕುವಂತೆ ಜೋಡಿಸಿರುವುದು ಕೊಠಡಿಯ ಅಂದವನ್ನು ಹೆಚ್ಚಿಸಿದೆ.

















## ಯೋಜನೆಗಳು




## ಪ್ರೊಜೆಕ್ಟರ್ ಬಳಕೆ :–

ಮಕ್ಕಳಿಗೆ ಬೋಧಿಸಲು ಅನುಕೂಲ ವಾಗಲು ನಮ್ಮ ಶಾಲೆಯಲ್ಲಿ ಪ್ರೊಜೆಕ್ಟರ್ ಬಳಕೆಯನ್ನು ಮಾಡಲಾಗಿದೆ ಮಕ್ಕಳಿಗೆ ವಿವಿಧ ಚಟುವಟಿಕೆಯನ್ನು ಉದಾ:–ಕ್ರಾಫ್ಟ್, ಇಂಗ್ಲೀಷ್ ಕಥೆಗಳು ಹಾಡುಗಳು, ಇದರ ಮೂಲಕ ಮಕ್ಕಳು ಸುಲಭವಾಗಿ ಕಲಿಯಲು ಅನುಕೂಲವಾಗುತ್ತದೆ.






**മ**

**ಮೈಕ್ರೋ ಅಧ್ಯಯನ:–** ಶ್ರಿ ಮೊಹಮ್ಮದ್ ಅಸ್ಲಂ ಸಿ,ಆರ್,ಪಿಅರಳೀಹಳ್ಳಿ ಕ್ಲಸ್ಟರ್ ಭದ್ರಾವತಿ (ತಾ) ಇವರು ಮೈಕ್ರೋ ಅಧ್ಯಯನ ವೀಕ್ಷಕರಾಗಿ ಆಗಮಿಸಿ ಸದರಿ ಶಾಲೆಯ ನಲಿ–ಕಲಿ ನಿರ್ವಹಣೆ ಕುರಿತು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಈ ಸಮಯದಲ್ಲಿ ಸಿ.ಆರ್.ಪಿ ಮನ್ಸೂರ್ ಅಹ್ಮದ್ ಭಾಗವಹಿಸಿದರು.

**ನಲಿ–ಕಲಿ ಶಿಕ್ಷಕರ ಸಿ.ಆರ.ಜಿ ಸಭೆ:–** ದಿನಾಂಕ : 12–02–2019 ರಂದು ಭದ್ರಾವತಿ ತಾಲ್ಲೂಕಿನ 4 ಉರ್ದು ಕ್ಲಸ್ಟರ್‌ನ ನಲಿ–ಕಲಿ ಶಿಕ್ಷಕರು ಮತ್ತು ಉರ್ದು ಸಿ,ಆರ್,ಪಿ,ಗಳ ಸಮ್ಮುಖದಲ್ಲಿ. ಸಿ,ಆರ್,ಜಿ [ನಲಿ–ಕಲಿ ಕೋಶ] ಸಭೆಯನ್ನು ನಡೆಸಲಾಯಿತು, ಸದರಿ ಸಭೆಯಲ್ಲಿ, ಶ್ರೀಮತಿ ನೂರ್ ಫಾತೀಮ ಇವರು ಪ್ರಾಯೋಗಿಕ ಪಾಠವನ್ನು ನೀಡಿದರು ಮತ್ತು ಕಲಿಕೋಪಕರಣ ತಯಾರಿ ಬಗ್ಗೆ ಮಾಹಿತಿ ನೀಡಿದರು, ಹಾಜರಿದ್ದ ಎಲ್ಲಾ ಶಿಕ್ಷಕರು ನಲಿ–ಕಲಿ ತರಗತಿ ನಿರ್ವಹಣೆ ಮತ್ತು ಕೊಠಡಿ ನಿರ್ವಹಣೆ ಕುರಿತು ಸಂತಸ ವ್ಯಕ್ತಪಡಿಸಿದರು. ಈ ದಿನ ಸಿ.ಆರ್.ಪಿ. ಮನ್ಸೂರ್ಅಹಮದ್ ಭಾಗವಹಿಸಿದರು.








## ಜಿಲ್ಲಾ ನ್ಯಾಯಧೀಶರ ಭೇಟಿ

ಜಿಲ್ಲಾ ನ್ಯಾಯಧೀಶರಾದ ಶ್ರೀ ಸೋಮಶೇಖರ್ ಬಾದಾಮಿರವರು ಆಗಮಿಸಿ ನಮ್ಮ ಶಾಲೆಯ ನಲಿ–ಕಲಿ ತರಗತಿ ಮತ್ತು ಕೊಠಡಿ ನಿರ್ವಹಣೆ ವೀಕ್ಷಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

## 2019–20 ನೇ ಸಾಲಿನಲ್ಲಿ ಉತ್ತಮ ನಲಿಕಲಿ ಶಾಲಾ ಪ್ರಶಸ್ತಿ

2018–19 ನೇ ಸಾಲಿನಲ್ಲಿ ನಲಿಕಲಿಯಲ್ಲಿ ಉತ್ತಮ ಸಾಧನೆ ತೋರಿಸಿದ್ದಕ್ಕಾಗಿ ತಾಲ್ಲೂಕು ಮಟ್ಟದಲ್ಲಿ ಆಯೋಜನೆಗೊಳ್ಳುವ ಸೆಪ್ಟೆಂಬರ್ 05 ಶಿಕ್ಷಕರ ದಿನಾಚರಣೆ ದಿನದಂದು ಮುಖ್ಯ ಶಿಕ್ಷಕರು ಹಾಗೂ ನಲಿಕಲಿ ಶಿಕ್ಷಕರು ಹಾಜರಿದ್ದು ಪ್ರಶಸ್ತಿಯನ್ನು ಸ್ವೀಕರಿಸಿದರು.

